

## ಚಾಕು ನೋಡಿರಲಿಲ್ವಾ?

ಈಚೆಗೆ ನೆಂಟರ ಮನೆಗೆ ಹೋದಾಗ ಅಲ್ಲಿ ಅವರ ಮೊಮ್ಮಕ್ಕಳ ಜತೆ ಮಾತನಾಡುತ್ತಾ ಕೂತಿದ್ದೆವು. ಚಿಕ್ಕ ಹುಡುಗಿ ತನು ಬಲು ಚೂಟಿ. 'ದೊಡ್ಡವಳಾದ ಮೇಲೆ ನೀನು ಏನಾಗ್ತೀಯಾ?' ಎಂದು ನಮ್ಮ ಮನೆಯವರು ಕೇಳಿದಾಗ– 'ಟೀಚರ್ ಆಗ್ತೀನಿ' ಅಂದಳು. ಅವಳ ಅಪ್ಪಅಮ್ಮ ಇಬ್ಬರೂ ಡಾಕ್ಟರು. 'ಯಾಕೆ, ನೀನು ಅಪ್ಪಅಮ್ಮನ ಹಾಗೆ ಡಾಕ್ಟರ್ ಆಗೋದಿಲ್ಲ?' ಎಂದು ಮತ್ತೆ ಪ್ರಶ್ನೆ ಮಾಡಿದರು.

ಅದಕ್ಕೆ ತನು, 'ನಂಗೆ ಭಯ ಆಗುತ್ತಪ್ಪ' ಎಂದಳು. 'ಭಯ ಯಾಕೆ ಮಗು, ಎಷ್ಟೊಂದು ಜನ ಡಾಕ್ಟ್ರಾಗಿಲ್ವಾ? ನಿಮ್ಮ ಅಪ್ಪಅಮ್ಮನೇ ಇದಾರಲ್ಲಾ' ನಮ್ಮ ಮನೆಯವರ ಪ್ರೋತ್ಸಾಹದ ಮಾತುಗಳು ಸಹಾ ಉಪಯೋಗಕ್ಕೆ ಬರಲಿಲ್ಲ. 'ನಮ್ಮ ಅಮ್ಮನ್ ಫ್ರೆಂಡ್ ಒಬ್ರು ನೈಟ್ ಡ್ಯೂಟಿ ಮುಗಿಸ್ಕಂಡು ರಾತ್ರಿ ಬರೋವಾಗ ಐದು ಜನ ಅವರಿಗೆ ಚಾಕು ತೋರಿಸಿದ್ರು ಗೊತ್ತಾ?' ಅಂದಳು ತನು ಭಯ ನಟಿಸುತ್ತಾ. ತಮಾಷೆಯ ಸ್ವಭಾವದವರಾದ ನಮ್ಮ ಮನೆಯವರು 'ಯಾಕೆ, ಆ ಡಾಕ್ಟ್ರು ಚಾಕು ನೋಡಿರ್ಲಿಲ್ವಂತಾ?' ಎಂದು ಕೇಳುವುದೇ.

**ಬಿ.ಎಸ್. ರಾಜಲಕ್ಷ್ಮಿ**

## ನಾಲ್ಕು ಬಣ್ಣ

ಪುಣೆಯಲ್ಲಿರುವ ನನ್ನ ಮೊಮ್ಮಗಳು ದಿಯಾ ಯುಕೆಜಿಯಲ್ಲಿ ಓದುತ್ತಿದ್ದಾಳೆ. ಈ ವರ್ಷದ ದೀಪಾವಳಿಯ ಸಂದರ್ಭದಲ್ಲಿ ರಜೆಗೆ ಬೆಂಗಳೂರಿಗೆ ಬಂದಿದ್ದಳು.

ಅವಳು ತನ್ನ ಶಾಲೆಯ ಚಟುವಟಿಕೆಗಳು, ಆಟಪಾಠಗಳ ಬಗ್ಗೆ ನಮಗೆಲ್ಲ ಖುಷಿಯಾಗಿ ಹೇಳುತ್ತಿದ್ದಳು. ನನ್ನನ್ನು ಕೇಳಿದಳು–

'ತಾತಾ, ನಮ್ಮ ರಾಷ್ಟ್ರಧ್ವಜದಲ್ಲಿ ಎಷ್ಟು ಬಣ್ಣಗಳು ಇವೆ?' ಎಂದು ಪ್ರಶ್ನಿಸಿದಳು.

ನಾನು 'ಕೇಸರಿ, ಬಿಳಿ, ಹಸಿರು' ಎಂದು ಉತ್ತರಿಸಿದೆ. ಅದಕ್ಕವಳು ತನ್ನ ಪುಸ್ತಕದಲ್ಲಿ ಕೊಟ್ಟಿರುವ ರಾಷ್ಟ್ರಧ್ವಜದ ಚಿತ್ರದಲ್ಲಿಯ ಬಿಳಿ ಪಟ್ಟಿಯಲ್ಲಿಯ ನೀಲಿ ವರ್ಣದ ಚಕ್ರವನ್ನು ತೋರಿಸಿ, 'ತಾತಾ, ಮೂರು ಬಣ್ಣಗಳೊಂದಿಗೆ ನೀಲಿ ಬಣ್ಣ ಕೂಡ ಧ್ವಜದಲ್ಲಿದೆ, ಅಂದರೆ ಧ್ವಜದಲ್ಲಿ ನಾಲ್ಕು ಬಣ್ಣಗಳಲ್ಲವೆ?' ಎಂದುತ್ತರ ನೀಡಿದಳು.



**ಬಸವರಾಜ ಹುಡೇದಗಡ್ಡಿ**

ಚಿತ್ರಗಳು: ಗಣೇಶ ಆಚಾರ್ಯ